CC 1374/2019

ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ **13-06-2024**

ಪಾಟೀ ಸವಾಲು ಃ ಆರೋಪಿ ಪರಃ ಶ್ರೀ ಬಿ ಎಮ್ ಎಸ್ ವಕೀಲರಿಂದಃ

ನಾನು ಭೇಟಿ ನೀಡಿದ್ದೇನೆ ಎಂದು ಹೇಳುವ ಸ್ಥಳ ಕಾರ್ಕಳದ ಉಡುಪಿ ಬಸ್ಸುಸ್ಟಾಡ್ ನ ಹತ್ತಿರ ಇರುವ ಕಾರ್ಕಳ ಕಂಪ್ಲೆಕ್ಸನ ವಾಣಿಜ್ಯ ಸಂಕೀರ್ಣದಲ್ಲಿ ಇದೆ. ಸಾಕಷ್ಟು ವಾಣಿಜ್ಯ ಸಂಕೀರ್ಣದಲ್ಲಿ ಸಾಕಷ್ಟು ಅಂಗಡಿ ಮುಗಟ್ಟು ಗಳು ಇದೆ. ಸದರಿ ವಾಣಿಜ್ಯ ಸಂಕೀರ್ಣದಲ್ಲಿ ಹೋಟೆಲ್ ಬಂಜಾರ ಬಾರ್ ಆ್ಯಂಡ್ ರೆಸ್ಟೋರೆಂಟ್, ಎಮ್ ಎಸ್ ಐ ಎಲ್ ರವರ ಸಗಟು ಮದ್ಯ ಮಾರಾಟದ ಮಳಿಗೆ ಹಾಗೂ ವಿಠಲ ರಾಯ್ ಹೆಗ್ಡೆಯವರ ವಿಜಯ ವೈನ್ಸ ಎನ್ನುವ ಮದ್ಯ ಮಾರಾಟದ ಮಳಿಗೆ ಇದೆ. ತಾವು ದಾಳಿ ಮಾಡಿದ್ದೇನೆ ಎಂದು ಹೇಳುವ ಸ್ಥಳದ ಎಡ ಬಲದ ಬದಿಗಳಲ್ಲಿ ದುರ್ಗಾ ರೆಸ್ಟೊರೆಂಟ್,ದೆಲ್ಲಿ ದಾರ್ಬರ್ ಹೋಟೆಲ್, ಕೊನಿಕ ಕಲ್ಲರ್, ಸುಶೀಲ್ ಹೇರ್ ಡ್ರಸಿಂಗ್ ಸಲೂನ್, ರಾಧಿಕ ಸೂಪರ್ ಸೇಲ್, ಪ್ರಭು ಸಿಲ್ಕ, ಮೇಗಾ ಸ್ಯಾರಿ ಸೆಂಟರ್ ಹಾಗೂ ಇನ್ನಿತರ ಸುಮಾರು ಅಂಗಡಿ ಮುಗಟುಗಳು ಇವೆ ಎಂದರೆ ಸರಿ. ಆರೋಪಿತನು ಸದರಿ ವಾಣಿಜ್ಯ ಸಂಕೀರ್ಣದ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲು ಏನಾದರೂ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಆರೋಪಿತನು ಚಾಸಾ 7 ಗಣಪತಿ ಹೆಗ್ಡೆಯವರ ಬಳಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ದಾಳಿ ಮಾಡಿದ್ದೇನು ಎಂದು ಹೇಳುವ ಸಮಯದಲ್ಲಿ ಅಲ್ಲಿಯ ನೆರೆಕೆರೆಯವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿಲ್ಲ. ಚಾಸಾ 5 ಮತ್ತು 6 ತಕ್ಷೀರು ಸ್ಥಳದ

ನೆರೆಕೆರೆಯವರಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಕಾರ್ಕಳದವರು. ಚಾಸಾ 5 ರವರು ಕಾರ್ಕಳ ಕಂಪ್ಲೆಕ್ಸ ಯಿಂದ ಎರಡೂವರೆ ಕಿ ಮೀ ದೂರದವರು, ಚಾಸಾ 6 10 ಕಿ ಮೀ ದೂರದವರು ಎಂದರೆ ಸರಿ. ದಾಳಿ ಮಾಡಿದ್ದೇವೆ ಎಂದು ಹೇಳುವ ಸಮಯದಲ್ಲಿ ಇದ್ದ ಗಿರಾಕಿಗಳನ್ನು ವಿಚಾರಿಸಿದ್ದೀರಾ ಎಂದರೆ ಓಡಿ ಹೋಗಿರುತ್ತಾರೆ. ಆನಂತರ ಅವರುಗಳನ್ನು ವಿಚಾರಿಸಲು ಪ್ರಯತ್ನಿಸಿದ್ದೀರಾ ಎಂದರೆ ತನಿಖೆ ನಾನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಗಿರಾಕಿಗಳು ಕುಳಿತುಕೊಂಡಿದ್ದಾರೆ ಎಂದು ಹೇಳಲಾದ ಟೇಬಲ್ ಮತ್ತು ಕುರ್ಚಿಗಳನ್ನು ಸ್ವಾಧೀನಪಡಿಸಿಕೊಂಡಿದ್ದೀರಾ ಎಂದರೆ ಅಗತ್ಯ ಇಲ್ಲ. ನಿಪಿ.1 ರಲ್ಲಿ ಗಿರಾಕಿಗಳು ಓಡಿ ಹೋಗಿದ್ದಾರೆ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿ. ದಾಳಿ ಮಾಡಿದ್ದೇನೆ ಎಂದು ಹೇಳುವ ಸಮಯದಲ್ಲಿ ಅಲ್ಲಿನ ನೆರೆಕೆರೆಯವರನ್ನು ವಿಚಾರಿಸದೇ ಇರಲು ಯಾವುದೇ ಸಕಾರಣ ಇರುವುದಿಲ್ಲ. ದಾಳಿ ಮಾಡಿದ್ದೇನೆ ಎಂದು ಹೇಳುವ ಸ್ಥಳದ 25 ಅಡಿ ಅಂತರದಲ್ಲಿ ತುಂಬಾ ಅಂಗಡಿ ಮುಗಟುಗಳು ಇವೆ. ಶೋಧನ ವಾರೆಂಟ್ ನಲ್ಲಿ ದಾಳಿ ಮಾಡಿದ್ದೇವೆ ಎಂದು ಹೇಳುವ ಅಂಗಡಿಯ ಡೋರ್ ನಂಬರ್, ಆರ್ ಆರ್ ನಂಬರ್ ಅನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

ನಾನು ಪ್ರಶ್ನಿತಾ ತಕ್ಷೀರು ಸ್ಥಳಕ್ಕೆ ದಾಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳ ಮಹಜರನ್ನಾಗಲೀ, ಸ್ವತ್ತು ಸ್ವಾಧೀನತಾ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರಿಂದ 48 ಕ್ಕೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ಮು ಮಾಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರಿಂದ 48 ಅನ್ನು ಆರೋಪಿಯ ವಶದಿಂದ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾಳಿ ಮಾಡಿದ್ದೇನೆ ಎಂದು ಹೇಳುವ ಅಂಗಡಿಗೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಖ್ಯೆಸಂಖ್ಯೆಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು

ವಶಪಡಿಸಿಕೊಂಡಿದ್ದೇನೆ ಎಂದು ಹೇಳುವ ಮು ಮಾ ಗಳ ಮೇಲೆ ಬ್ಯಾಚ್ ನಂಬರ್ ಸಿರಿಸ್ ನಂಬರ್ ಇರುವುದಿಲ್ಲ ಎಂದರೆ ದಾಳಿಯ ಸಮಯದಲ್ಲಿ ಸಿಕ್ಕಿರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ